ಈ) ರಾಜ್ಯದಲ್ಲಿ ಇನ್ನೂ ಹೆಚ್ಚಿನ ಹಸಿರು ಪಡಿತರ ಚೀಟಿಗಳನ್ನು ವಿತರಿಸುವ ಉದ್ದೇಶ ಇರುವುದಿಲ್ಲ. ಎಲ್ಲಾ ನೈಜ ಬಿಪಿಎಲ್ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

ರಾಜ್ಯದ ಸಹಕಾರ ಸಂಘಗಳ ಆಡಿಟ್ ಫೀ ಬಗ್ಗೆ

2323(3050) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಲೆಕ್ಕ ಪರಿಶೋಧನ ಶುಲ್ಕ ದರದಹೆಚ್ಚಳದ ಬಗ್ಗೆ ಮನವಿ ಬಂದಿದ್ದು ಲೆಕ್ಕಪರಿಶೋಧನಾ ಶುಲ್ಕ ಆಕರಣೆಯನ್ನು ದುಡಿಯುವ ಬಂಡವಾಳ ಆಧರಿಸಿ rationalisation ಮಾಡುವ ಸರ್ಕಾರದ ಪ್ರಸ್ತಾವನೆ ಕಾರ್ಯ ರೂಪಕ್ಕೆ ಎಂದಿನಿಂದ ಬರುತ್ತದೆ;

ಆ) ಲೆಕ್ಕ ಪರಿಶೋಧನಾ ಶುಲ್ಕ ಹೆಚ್ಚು ಎಂದು ಕೆಲವು ಸಂಸ್ಥೆಗಳು ನ್ಯಾಯಾಲಯದ ಮೊರೆ ಹೋಗಿರುವುದು ನಿಜವೇ; ಹಾಗಿದ್ದಲ್ಲಿ ಸರ್ಕಾರದ ನಿಲುವೇನು;

ಇ) ಈ ಹಿನ್ನೆಲೆಯಲ್ಲಿ ಸರ್ಕಾರ ತಮ್ಮ ಮಾರ್ಗ ಸೂಚಿಯನ್ನು ಪ್ರಕಟಪಡಿಸುವುದೇ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಸಹಕಾರ ಸಂಘಗಳ ಅಧಿನಿಯಮ 63ರಂತೆ ಲೆಕ್ಕಪರಿಶೋಧನೆಯಾದ ಎಲ್ಲಾ ಸಂಘಗಳಿಗೆ ಲೆಕ್ಕ ಪರಿಶೋಧನಾ ಶುಲ್ಕದ ದರವನ್ನು ದುಡಿಯುವ ಬಂಡವಾಳ ಅಥವಾ ವ್ಯಾಪಾರ ವಹಿವಾಟು ಯಾವುದು ಹೆಚ್ಚೋ ಅದರ ಮೇಲೆ ಪ್ರತಿ ನೂರು ರೂಪಾಯಿಗಳಿಗೆ 20 ಪೈಸೆಯಂತೆ ನಿಗದಿಪಡಿಸಲಾಗಿದೆ.

ಲೆಕ್ಕ ಪರಿಶೋಧನಾ ಶುಲ್ಕದ ಹೆಚ್ಚಳವನ್ನು ಕಡಿಮೆ ಮಾಡುವಂತೆ ಕೆಲವು ಸಹಕಾರಿ ಸಂಸ್ಥೆಗಳು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದು ಸದರಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಕೆಲವೊಂದು ಸಹಕಾರ ಸಂಸ್ಥೆಗಳು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಲೆಕ್ಕ ಪರಿಶೋಧನಾ ಶುಲ್ಕದ ಹೆಚ್ಚಳವನ್ನು ಪ್ರಶ್ನಿಸಿ ರಿಟ್ ಅರ್ಜಿ ಸಲ್ಲಿಸಿರುತ್ತವೆ. ಲೆಕ್ಕ ಪರಿಶೋಧನಾ ಶುಲ್ಕವನ್ನು rationalization ಮಾಡುವ ವಿಷಯವು ಪರಿಶೀಲನೆಯಲ್ಲಿದೆ.

ಯಶಸ್ವಿನಿ ವಿಮಾ ಯೋಜನೆಯ ಅನುಷ್ಠಾನ

2324(3038) : ಶ್ರೀ ಅತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಯಶಸ್ವಿನಿ ವಿಮಾ ಯೋಜನೆಯು ಯಾವ್ಯಾವ ಜಿಲ್ಲೆಯಲ್ಲಿ ಅನುಷ್ಠಾನಗೊಂಡಿದೆ.

ಆ) ಈ ಯೋಜನೆಯ ವಿವರಗಳೇನು;

ಇ) ಇದರಿಂದಾಗಿ ರೈತ ಸಮುದಾಯಕ್ಕೆ ದೊರಕುವ ಸೌಲಭ್ಯಗಳೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಯಶಸ್ವಿನಿ ಸಹಕಾರ ರೈತ ಆರೋಗ್ಯ ಯೋಜನೆಯು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

ಆ) ಈ ಯೋಜನೆಯು ದಿನಾಂಕ: 1.6.2003 ರಿಂದ ಜಾರಿಗೆ ಬಂದಿರುತ್ತದೆ. ಸಹಕಾರ ಸಂಘದ ರೈತ ಸದಸ್ಯರು ಮಾಹೆಯಾನ 5 ರೂ. ನಂತೆ ವಾರ್ಷಿಕ 60.00 ರೂ.ಗಳನ್ನು ಪಾವತಿಸಬೇಕಾಗಿರುತ್ತದೆ. ಸರ್ಕಾರವು ತಮ್ಮ ಪಾಲಿನ ವಾರ್ಷಿಕವಾಗಿ 30.00 ರೂ.ಗಳು ಪಾವತಿಸುತ್ತದೆ.

ಈ ಯೋಜನೆಯನ್ನು ಅನುಷ್ಠಾನಗೊಳಿಸಲು 71 ಆಸ್ಪತ್ರೆಗಳು ಹಾಗೂ ನರ್ಸಿಂಗ್ ಹೋಂ–ಗಳನ್ನು ಗುರುತಿಸಲಾಗಿದೆ. 1600 ವಿವಿಧ ಶಸ್ತ್ರ ಚಿಕಿತ್ಸೆಗಳನ್ನು ಒಳಪಟ್ಟಿವೆ. ಈವರೆವಿಗೂ 16.01 ಲಕ್ಷ ರೈತ ಸದಸ್ಯರನ್ನು ನೋಂದಾಯಿಸಿ ರೂ. 9.60 ಕೋಟಿ ಮೊತ್ತವನ್ನು ಸಂಗ್ರಹಿಸಲಾಗಿದೆ ಈ ಮೊತ್ತವನ್ನು ಕರ್ನಾಟಕ ರಾಜ್ಯ ಸಜಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಇಡಲಾಗಿದೆ. ನೋಂದಾಯಿಸಲ್ಪಟ್ಟ ರೈತ ಸದಸ್ಯರಿಗೆ ಗುರುತಿನ ಚೀಟಿಯನ್ನು ವಿತರಿಸಲಾಗಿದೆ. ಈ ಯೋಜನೆಯ ಯಶಸ್ವಿ ಅನುಷ್ಠಾನಕ್ಕಾಗಿ ಮಾನ್ಯ ಮುಖ್ಯ ಮಂತ್ರಿಯವರನ್ನು ಚೀಫ್ ಪ್ಯಾಟ್ರನ್ ಆಗಿ ಮತ್ತು ಮಾನ್ಯ ಸಹಕಾರ ಮಂತ್ರಿಯವರನ್ನು ಪ್ಯಟ್ರನ್ ಆಗಿ ಟ್ರಸ್ಟ್ ಒಂದನ್ನು ರಚಿಸಲು ಉದ್ದೇಶಿಸಿದೆ.

ಇ) 1600 ವಿವಿಧ ಶಸ್ತ್ರ ಚಿಕಿತ್ಸೆಗಳನ್ನು ಗುರುತಿಸಲಾಗಿದೆ. ಒಬ್ಬ ಸದಸ್ಯರಿಗೆ ವರ್ಷಕ್ಕೆ ಒಂದು ಶಸ್ತ್ರ ಚಿಕಿತ್ಸೆ ಅದರಲ್ಲಿ ಗರಿಷ್ಟ 1 ಲಕ್ಷ ರೂ. ಒಂದಕ್ಕಿಂತ ಹೆಚ್ಚು ಶಸ್ತ್ರ ಚಿಕಿತ್ಸೆ ಆದಲ್ಲಿ ಗರಿಷ್ಠ 2.00 ಲಕ್ಷ ರೂ. ವರೆಗೆ ಭರಿಸಲಾಗುತ್ತದೆ. ಈವರೆಗೂ ಈ ಯೋಜನೆಯಡಿಯಲ್ಲಿ 384 ರೈತ ಸದಸ್ಯರು ಶಸ್ತ್ರ ಚಿಕಿತ್ಸಾ ಸೌಲಭ್ಯವನ್ನು ಹಾಗೂ 373 ರೈತ ಸದಸ್ಯರು ಹೊರ ರೋಗಿಗಳಾಗಿ ಚಿಕಿತ್ಸಾ ಸೌಲಭ್ಯವನ್ನು ಪಡೆದುಕೊಂಡಿರುತ್ತಾರೆ.

ರಾಜ್ಯದಲ್ಲಿ ರೈತ ಸಂತೆಗಳನ್ನು ಆರಂಭಿಸುವುದನ್ನು ಕುರಿತು

2325(3040) : ಶ್ರೀ ಅತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ರೈತ ಸಂತೆಯನ್ನು ಪ್ರಾರಂಭ ಮಾಡಲಾಗಿದೆ. (ಜಿಲ್ಲಾವಾರು ವಿವರ ನೀಡುವುದು);

ಆ) ರಾಜ್ಯ ಸರ್ಕಾರ ಇದಕ್ಕಾಗಿ ಎಷ್ಟು ಹಣ ಬಿಡುಗಡೆ ಮಾಡಿದೆ;

ಇ) ಇದರಿಂದ ರೈತರಿಗೆ ದೊರೆಕಿರುವ ಪ್ರಯೋಜನಗಳೇನು;

ಈ) ಈವರೆವಿಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಮಾರುಕಟ್ಟೆ ಸಚಿವರು)

ಅ) ರಾಜ್ಯದಲ್ಲಿ ಪ್ರಸ್ತುತ 3 ರೈತರ ಸಂತೆಗಳನ್ನು ಪ್ರಾರಂಭ ಮಾಡಲಾಗಿದ್ದು, ವಿವರ ಕೆಳಕಾಣಿಸಿದಂತಿದೆ.

1.	ಬೆಂಗಳೂರು ನಗರ ಜಿಲ್ಲೆ	–	ಯಲಹಂಕ
2.	ಧಾರವಾಡ ಜಿಲ್ಲೆ	–	ಹುಬ್ಬಳ್ಳಿ
3.	ಚಿತ್ರದುರ್ಗ ಜಿಲ್ಲೆ	–	ಚಿತ್ರದುರ್ಗ

ಆ) ಯಾವುದೇ ಹಣ ಬಿಡುಗಡೆ ಮಾಡಿರುವುದಿಲ್ಲ.

ಇ) ರೈತರ ಸಂತೆ ಸ್ಥಾಪನೆಯ ಉದ್ದೇಶ ಹಾಗೂ ರೈತರಿಗೆ ದೊರೆಯುವ ಅನುಕೂಲತೆಗಳ ವಿವರ.

1. ರೈತ ಮಾರಾಟಗಾರರು ಹಾಗೂ ಗ್ರಾಹಕರಿಗೆ ನೇರ ಸಂಪರ್ಕ ಕಲ್ಪಿಸುವುದು.
2. ಹಣ್ಣು ಮತ್ತು ತರಕಾರಿಗಳ ಸಣ್ಣ ಮತ್ತು ಅತೀ ಸಣ್ಣ ರೈತರು ತಮ್ಮ ಉತ್ಪನ್ನಗಳನ್ನು ತಾವೇ ಮಾರಾಟ ಮಾಡುವ ವ್ಯವಸ್ಥೆ ಇರುವುದರಿಂದ ರೈತನು ಮಾರಾಟದ ಕೌಶಲ್ಯವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.